ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, 2nd Floor, DTE Building, Palace Road, Bangalore - 560 001; Phone: 080 2226 3327, Fax: 080 2228 3758, email: bngcce@kar.nic.in

ಸಂಖ್ಯೆ: ಕಾಶಿಇ/135/ಕಾರ್ಯಭಾರ/2014-15/ವ&ನಿ ದಿನಾಂಕ:22/09/2017

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ/ಅನುದಾನಿತ ಪದವಿ ಕಾಲೇಜುಗಳ ಉಪನ್ಯಾಸಕರು ಯುಜಿಸಿ ನಿಯಮಾವಳಿಗಳನುಸಾರವಾಗಿ ವಾರದಲ್ಲಿ 40 ತಾಸುಗಳ ಕಾರ್ಯಭಾರ ನಿರ್ವಹಣೆ ಮಾಡುವ ಬಗ್ಗೆ

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/236/ಕಾಭಾಹ/2012-13 ದಿನಾಂಕ:16/02/2013

--

ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿನಾಂಕ:24/12/2009 ರ ಕಂಡಿಕೆ 26.01ರನ್ವಯ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರು ವಾರದಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ 40 ತಾಸುಗಳ ಕಾರ್ಯಭಾರದ ವಿವರಗಳು ಈ ಕೆಳಗಿನಂತಿದೆ:-

| ಕಾರ್ಯಭಾರ ವಿವರ | ಸಹಾಯಕ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು | |
|---|---|---|
| | ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ (ಗಂಟೆಗಳು) | ಪ್ರಾಯೋಗಿಕ ತರಗತಿಗಳಿಲ್ಲದ ವಿಷಯಗಳಲ್ಲಿ (ಗಂಟೆಗಳು) |
| ನೇರ ಬೋಧನಾ ಕಾರ್ಯಭಾರ (ಭೋದನೆ ಮತ್ತು ಪ್ರಾಯೋಗಿಕ ತರಗತಿಗಳು ಸೇರಿ) | 20 | 16 |
| ಟೆಸ್ಟ್‌ಗಳು/ಪರೀಕ್ಷೆಗಳು | 02 | 02 |
| ಟ್ಯುಟೋರಿಯಲ್ ತರಗತಿಗಳು | 04 | 04 |
| ಪಾಠ ಪ್ರವಚನಗಳ ತಯಾರಿ | 8 | 10 |
| ಪಠ್ಯೇತರ ಚಟುವಟಿಕೆ | 04 | 04 |
| ಪ್ರಾಂಶುಪಾಲರಿಗೆ ಆಡಳಿತದಲ್ಲಿ ಸಹಾಯ | 02 | 04 |
| **ಒಟ್ಟು** | **40** | **40** |

ಪ್ರಸ್ತುತ ಕಾಲೇಜುಗಳ ತಪಾಸಣಾ ಕಾರ್ಯ ಕೈಗೊಂಡ ಸಂದರ್ಭದಲ್ಲಿ, ನೇರ ಬೋಧನಾ ಕಾರ್ಯಭಾರ ಮತ್ತು ಪ್ರಾಯೋಗಿಕ ತರಗತಿಗಳನ್ನು ಹೊರತುಪಡಿಸಿದಂತೆ ಉಳಿಕೆ ಕಾರ್ಯಭಾರಗಳನ್ನು ನಿರ್ವಹಿಸಿರುವ ಬಗ್ಗೆ ಮಾಹಿತಿಯನ್ನು ಕಾಲೇಜಿನ ವೇಳಾ ಪಟ್ಟಿ, ಉಪನ್ಯಾಸಕರ ದಿನಚರಿಗಳಲ್ಲಿ ನಮೂದಿಸಲಾಗಿರುವುದು ಹಾಗೂ ಟ್ಯುಟೋರಿಯಲ್ ತರಗತಿಗಳನ್ನು ನಡೆಸುವ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿರುವುದು ಕಂಡುಬರುತ್ತಿಲ್ಲ.

ಆದ್ದರಿಂದ ಈ ಇಲಾಖೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿ ಸಹಾಯಕ ಪ್ರಾಧ್ಯಾಪಕರು,ಸಹಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳು ತಮ್ಮ ದಿನಚರಿಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಹಾಗೂ ಮೇಲ್ಕಾಣಿಸಿದಂತೆ ವಾರಕ್ಕೆ 40 ತಾಸುಗಳ ಕಾರ್ಯಭಾರ ನಿರ್ವಹಿಸಿರುವ ಬಗ್ಗೆ ವಿವರಗಳನ್ನು ದಿನಚರಿಯಲ್ಲಿ ದಾಖಲಿಸುವಂತೆ ಸೂಚಿಸಲಾಗಿದೆ.

ಮುಂದುವರೆದಂತೆ, ಉಪನ್ಯಾಸಕರು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾದ ಟ್ಯೂಟೋರಿಯಲ್ ತರಗತಿಗಳ ವಿವರಗಳನ್ನು ಕಾಲೇಜಿನ ವೇಳಾಪಟ್ಟಿ ಹಾಗೂ ಉಪನ್ಯಾಸಕರ ವೈಯಕ್ತಿಕ ವೇಳಾಪಟ್ಟಿಗಳಲ್ಲಿ ಅಳವಡಿಸುವಂತೆ ಹಾಗೂ ಈ ಬಗ್ಗೆ ವಿದ್ಯಾರ್ಥಿಗಳಿಗೆ ಮುನ್ಸೂಚನೆ ನೀಡಲು ಮಾಹಿತಿಯನ್ನು ಕಡ್ಡಾಯವಾಗಿ ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು
22/9/17

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಸೂಕ್ತ ಕ್ರಮಕ್ಕಾಗಿ ಹಾಗೂ ಸದರಿ ಸುತ್ತೋಲೆಯನ್ನು ಕಾಲೇಜಿನ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವುದು.

**ಪ್ರತಿಯನ್ನು**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿಗಾಗಿ ಹಾಗೂ ಮೇಲಿನ ಸುತ್ತೋಲೆಯನ್ನು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.
2. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ- ಮಾಹಿತಿಗಾಗಿ
3. ಕಛೇರಿ ಪ್ರತಿ.

**ಕಾಲೇಜು ಶಿಕ್ಷಣ ಇಲಾಖೆ**
ಕರ್ನಾಟಕ ಸರ್ಕಾರ
**Department of Collegiate Education**
Government of Karnataka

ಸಂಖ್ಯೆ: ಕಾಶಿಇ/135/ಕಾರ್ಯಭಾರ/2014-15/ವ&ನಿ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:22/09/2017

**ಸುತ್ತೋಲೆ**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ/ಅನುದಾನಿತ ಪದವಿ ಕಾಲೇಜುಗಳ ಉಪನ್ಯಾಸಕರು ಯುಜಿಸಿ ನಿಯಮಾವಳಿಗಳನುಸಾರವಾಗಿ ವಾರದಲ್ಲಿ 40 ತಾಸುಗಳ ಕಾರ್ಯಭಾರ ನಿರ್ವಹಣೆ ಮಾಡುವ ಬಗ್ಗೆ

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/236/ಕಾಭಾಹ/2012-13 ದಿನಾಂಕ:16/02/2013

--

ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್ಇ/2009 ದಿನಾಂಕ:24/12/2009 ರ ಕಂಡಿಕೆ 26.01ರನ್ವಯ ಸಹಾಯಕ ಪ್ರಾಧ್ಯಾಪಕರು. ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರು ವಾರದಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ 40 ತಾಸುಗಳ ಕಾರ್ಯಭಾರದ ವಿವರಗಳು ಈ ಕೆಳಗಿನಂತಿದೆ:-

| ಕಾರ್ಯಭಾರ ವಿವರ | ಸಹಾಯಕ ಪ್ರಾಧ್ಯಾಪಕರು.ಸಹಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು | |
|---|---|---|
| | ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ (ಗಂಟೆಗಳು) | ಪ್ರಾಯೋಗಿಕ ತರಗತಿಗಳಿಲ್ಲದ ವಿಷಯಗಳಲ್ಲಿ (ಗಂಟೆಗಳು) |
| ನೇರ ಬೋಧನಾ ಕಾರ್ಯಭಾರ | 16 | 16 |
| ಪ್ರಾಯೋಗಿಕ ತರಗತಿಗಳು | 04 | - |
| ಟೆಸ್ಟ್‌ಗಳು/ಪರೀಕ್ಷೆಗಳು | 02 | 02 |
| ಟ್ಯುಟೋರಿಯಲ್ ತರಗತಿಗಳು | 04 | 04 |
| ಪಾಠ ಪ್ರವಚನಗಳ ತಯಾರಿ | 8 | 10 |
| ಪಠ್ಯೇತರ ಚಟುವಟಿಕೆ | 04 | 04 |
| ಪ್ರಾಂಶುಪಾಲರಿಗೆ ಆಡಳಿತದಲ್ಲಿ ಸಹಾಯ | 02 | 04 |
| **ಒಟ್ಟು** | **40** | **40** |

ಪ್ರಸ್ತುತ ಕಾಲೇಜುಗಳ ತಪಾಸಣಾ ಕಾರ್ಯ ಕೈಗೊಂಡ ಸಂದರ್ಭದಲ್ಲಿ, ನೇರ ಬೋಧನಾ ಕಾರ್ಯಭಾರ ಮತ್ತು ಪ್ರಾಯೋಗಿಕ ತರಗತಿಗಳನ್ನು ಹೊರತುಪಡಿಸಿದಂತೆ ಉಳಿಕೆ ಕಾರ್ಯಭಾರಗಳನ್ನು ನಿರ್ವಹಿಸಿರುವ ಬಗ್ಗೆ ಮಾಹಿತಿಯನ್ನು ಕಾಲೇಜಿನ ವೇಳಾ ಪಟ್ಟಿ, ಉಪನ್ಯಾಸಕರ ದಿನಚರಿಗಳಲ್ಲಿ ನಮೂದಿಸಲಾಗಿರುವುದು ಹಾಗೂ ಟ್ಯುಟೋರಿಯಲ್ ತರಗತಿಗಳನ್ನು ನಡೆಸುವ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿರುವುದು ಕಂಡುಬರುತ್ತಿಲ್ಲ.

ಆದ್ದರಿಂದ ಈ ಇಲಾಖೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿ ಸಹಾಯಕ ಪ್ರಾಧ್ಯಾಪಕರು,ಸಹಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳು ತಮ್ಮ ದಿನಚರಿಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಹಾಗೂ ಮೇಲ್ಕಾಣಿಸಿದಂತೆ ವಾರಕ್ಕೆ 40 ತಾಸುಗಳ ಕಾರ್ಯಭಾರ ನಿರ್ವಹಿಸಿರುವ ಬಗ್ಗೆ ವಿವರಗಳನ್ನು ದಿನಚರಿಯಲ್ಲಿ ದಾಖಲಿಸುವಂತೆ ಸೂಚಿಸಲಾಗಿದೆ.